**ದಿನಾಂಕಃ 28-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 7, 8 ಮತ್ತು 12 ನೇ ಪ್ರತಿವಾದಿ ಪರ ಶ್ರೀ ಬಿ.ಹೆಚ್.ಕೆ ವಕೀಲರಿಂದಃ**

ನನ್ನ ಮದುವೆಯಾಗಿ 30 ರಿಂದ 35 ವರ್ಷಗಳು ಆಗಿರುತ್ತವೆ. ಎಷ್ಟು ಹೊಲಗಳನ್ನು ಖರೀದಿಸಲಾಗಿದೆ ಮತ್ತು ಎಷ್ಟು ಹೊಲಗಳು ಹಿರಿಯರಿಂದ ಬಂದಿರುವ ಆಸ್ತಿಗಳು ಎಂದರೆ ಸಾಕ್ಷಿ ಎಲ್ಲ ಆಸ್ತಿಗಳು ನನ್ನ ತಂದೆ ಆಸ್ತಿ ಎಂದು ನುಡಿಯುತ್ತಾರೆ. ಎಲ್ಲಾ ಆಸ್ತಿಗಳು ಈಗ ನನ್ನ ತಂದೆ ಹೆಸರಿನಲ್ಲಿ ಇರುವುದಿಲ್ಲ, ಮಕ್ಕಳ ಹೆಸರಿನಲ್ಲಿ ಮಾಡಿರುತ್ತಾರೆ. ಮೂವರು ಗಂಡು ಮಕ್ಕಳ ಹೆಸರಿನಲ್ಲಿ ಮಾಡಿರುತ್ತಾನೆ. ಮೂವರು ಮಕ್ಕಳ ಹೆಸರಿನಲ್ಲಿ ಆಸ್ತಿ ಮಾಡಿ ಸುಮಾರು 30 ವರ್ಷಗಳು ಆಗಿರುತ್ತವೆ. ಸದರಿ ಆಸ್ತಿಗಳಲ್ಲಿ ಎಲ್ಲರಿಗೂ ಸಮನಾಗಿ ಮಾಡಿರುತ್ತಾನೆ. ನನ್ನ ತಂದೆಗೆ ಮೂರು ಜನ ಗಂಡು ಮಕ್ಕಳು ಇರುತ್ತಾರೆ. ನನ್ನ ತಂದೆ ಆಸ್ತಿಗಳನ್ನು ಮಕ್ಕಳ ಹೆಸರಿನಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹತ್ತಿರ ಮಾಡಿರುತ್ತಾನೆ. ಆಗ ನಾವು ಹೆಣ್ಣು ಮಕ್ಕಳು ತಕಾರರು ಮಾಡಿರುತ್ತೇವೆ. 35 ವರ್ಷಗಳಿಂದ ಯಾಕೆ ನ್ಯಾಯಾಯಕ್ಕೆ ಬರಲಿಲ್ಲ ಎಂದರೆ ಸಾಕ್ಷಿ ಇವತ್ತು ಇಲ್ಲ ನಾಳೆ ಕೊಡುತ್ತೇವೆ ಅಂದಿದಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮೂರು ಜನ ಮಕ್ಕಳಿಂದ ಒಪ್ಪಿಗೆ ಪಡೆದು ನಮ್ಮ ತಂದೆ ನಮ್ಮ ಸಹೋದರನ ಹೆಸರಿನಲ್ಲಿ ದಾಖಲಿರುತ್ತಾನೆ ಎಂದರೆ ಸರಿಯಲ್ಲ.

**02.** 1 ಮತ್ತು 7 ನೇ ಪ್ರತಿವಾದಿ ನಮ್ಮ ಜೊತೆ ಮಾತನಾಡುವುದಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣ ದಾಖಲಾದ ನಂತರ ಮಾತನಾಡುವುದಿಲ್ಲ ಎಂದು ನುಡಿಯುತ್ತಾರೆ. 2 ರಿಂದ 13 ನೇ ಪ್ರತಿವಾದಿಯರು ಯಾರು ನಮ್ಮ ಜೊತೆ ಮಾತನಾಡುವುದಿಲ್ಲ. 7 ನೇ ಪ್ರತಿವಾದಿ ತನ್ನ ಪಾಲಿಗೆ ಬಂದಂತಹ ಆಸ್ತಿ ತನ್ನ ಅಣ್ಣನಾದ 12 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನಿಜ. ಆದರೆ ಎಷ್ಟು ವರ್ಷಗಳ ಹಿಂದೆ ಬಿಟ್ಟುಕೊಟ್ಟಿರುತ್ತಾಳೆ ಎಂದು ನನಗೆ ಗೊತ್ತಿರುವುದಿಲ್ಲ. 12 ನೇ ಪ್ರತಿವಾದಿ ಸರ್ವೆ ನಂ.94 ರಲ್ಲಿ ವಿಸ್ತೀರ್ಣ 19 ಎಕರೆ 27 ಗುಂಟೆ

ಜಮೀನನ್ನು ಬಿತ್ತಿ ಬೆಳೆಯುತ್ತಾನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಸುಮಾರು 25 ವರ್ಷದಿಂದ 12 ನೇ ಪ್ರತಿವಾದಿ ಬಿತ್ತಿ ಬೆಳೆಯುತ್ತಾನೆ ಎಂದರೆ ಸರಿಯಲ್ಲ.

**03.** ನನ್ನ ಗಂಡನ ಮನೆ ಕೋಳಿಹಾಳ ಗ್ರಾಮ ಇರುತ್ತದೆ. ಸರ್ವೆ ನಂ.72/1/ಅ ಮತ್ತು 72/1/ಆ ಜಮೀನುಗಳನ್ನು ಹಿರಿಯರ ಆಸ್ತಿಗಳಿಂದ ಬಂದ ಆದಾಯಗಳಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯೇ ಖರೀದಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. 12 ನೇ ಪ್ರತಿವಾದಿ ಈತನು ಸದರಿ ಜಮೀನನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಹಿರಿಯರ ಆಸ್ತಿಯಲ್ಲಿ ಮತ್ತು ಖರೀದಿಸಿದ ಆಸ್ತಿಯಲ್ಲಿ ಮೂರು ಜನ ಅಣ್ಣ-ತಮ್ಮಂದಿರಿಗೂ ಪಾಲುವಿಭಾಗ ಆಗಿರತ್ತುದೆ ಅದಕ್ಕೆ ನಾವು ಹೆಣ್ಣು ಮಕ್ಕಳು ಒಪ್ಪಿಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ.94 ಕ್ಷೇತ್ರ 19 ಎಕರೆ 27 ಗುಂಟೆ ಜಮೀನಿಗೆ 12 ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜದಾರ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನನ್ನದಾಗಲಿ, ಬೇರೆಯವರಿದಾಗಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ರಿಂದ 6 ನೇ ಪ್ರತಿವಾದಿಯರು ಕೂಡಿ ಸದರಿ ಆಸ್ತಿಯನ್ನು ಕಬಳಿಸಬೇಕೆನ್ನುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಈಗಾಗಲೇ ಪಾಲು ಆಗಿದ್ದು ಇದರಲ್ಲಿ ನನ್ನ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: 13 ನೇ ಪ್ರತಿವಾದಿ ಪರ ಶ್ರೀ ಎಸ್.ಎನ್.ಎಸ್ ವಕೀಲರಿಂದಃ**

ದಾವೆ ಮಾಡಲಿಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವಾ ಮಾಡುವ ಕಾಲಕ್ಕೆ ಅದಕ್ಕೆ ಮಾಹಿತಿ ಕೊಡುವ ಸಮಯದಲ್ಲಿ ದಾವೆಗೆ ಸಂಬಂಧಿಸಿದ ಪಹಣಿಗಳನ್ನು ಮತ್ತು ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು ತೆಗೆಸಿದ ಪಹಣಿ ಪತ್ರಿಕೆಗಳಲ್ಲಿ ನನ್ನ ಹೆಸರು ಇರಲಿಲ್ಲ ಎಂದರೆ ಸರಿಯಲ್ಲ. ಸನ್ 1994 ನೇ ಸಾಲಿನಿಂದಲೂ ಯಾವುದೇ ಹೆಣ್ಣು ಮಕ್ಕಳ ಹೆಸರು ಪಹಣಿಯಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಸಹೋದರರು

ವಾಟಣಿ ಮಾಹಿತಿ ಬಂದ ಬಗ್ಗೆ ನನಗೆ ಕಂಡುಬರಲಿಲ್ಲ. ಸದರಿ ದಾಖಲಾತಿಗಳ ವಿರುದ್ಧ ನಾನು ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಮುಂದೆ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ನನಗೆ ಮದುವೆಯಾಗಿ ಗಂಡನ ಮನೆಯಲ್ಲಿ ಇರುವುದರಿಂದ ನಾನು ಯಾವಾಗಾದರೂ ಒಮ್ಮೆ ತವರು ಮನೆಗೆ ಬಂದು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ದಿನಾಲೂ ಹೋಗಿ ಬರುವುದು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ದಾವಾ ಜಮೀನನ್ನು ನಾನು ಎಂದೂ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಬೀಜ ಗೊಬ್ಬರ ತಂದಿರುವ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ದಾವಾ ಆಸ್ತಿಯಲ್ಲಿ ಬೆಳೆ ಬೆಳೆದ ಬಗ್ಗೆ ಮತ್ತು ಅವುಗಳನ್ನು ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. 1994 ರಲ್ಲಿ ನನ್ನ ಸಹೋದರರು ವಾಟಣಿ ಮಾಡಿಕೊಂಡ ಬಗ್ಗೆ ಗೊತ್ತಿದ್ದರೂ ಸಹಿತ 25 ವರ್ಷ ನಾನು ಸುಮ್ಮನೆ ಇದ್ದೆನು ಎಂದರೆ ಸರಿಯಲ್ಲ. ಸದರಿ ನನ್ನ ಸಹೋದರರು ವಾಟಣಿ ಮಾಡಿಕೊಂಡಿರುತ್ತಾರೆ ಎನ್ನುವ ವಿಷಯ ಗೊತ್ತಿದ್ದರೂ ಸಹಿ ನಾನು ಸುಮ್ಮನೆ ಇದ್ದೆನು ಎಂದರೆ ಸರಿಯಲ್ಲ. ಆಗ ವಾಟಣಿ ಮಾಡಿಕೊಂಡಿದ್ದರಿಂದ ದಾವಾ ಆಸ್ತಿಗಳಲ್ಲಿ ನನ್ನ ಹೆಸರು ದಾಖಲಾಗಿಲ್ಲ ಎದಂರೆ ಸರಿಯಲ್ಲ. 25 ಅಂದರೆ 1994 ರಿಂದ ನಮ್ಮ ಕಬ್ಜಯಿಂದ  ಹೊರಹಾಕಿ ನನ್ನ ಸಹೋದರರು ಜಮೀನು ಬಿತ್ತಿ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಈಗ ನಾನು ಕಬ್ಜಯಲ್ಲಿ ಇರುತ್ತೇನೆ ಎಂದು ಬರೆಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯ ಬೆಲೆ ಹೆಚ್ಚಾಗಿರುವುದರಿಂದ ಅದನ್ನು ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.